ಸೋಮವಾರ,5 ಜೂನ್ 2017 | ಪುಟಗಳು: 18+6 | ಬೆಲೆ: ₹ 5.00
www.vijaykarnataka.com
ಸಂಪುಟ: 16 | ಸಂಚಿಕೆ: 310
ಮಂಗಳೂರು | ಬೆಂಗಳೂರು | ಮೈಸೂರು | ಶಿವಮೊಗ್ಗ | ಹುಬ್ಬಳ್ಳಿ | ಬಾಗಲಕೋಟ | ಕಲಬುರಗಿ |
VK
ವಿಜಯ ಕರ್ನಾಟಕ

ಇಂದು ವಿಶ್ವ ಪರಿಸರ ದಿನ



ಸಂಸತ್ ಕಲಾಪ ಹಾಜರಿ: ಅನಾರೋಗ್ಯವಿದ್ದರೂ ರಾಹುಲ್‌ರನ್ನು ಮೀರಿಸಿದ ಸೋನಿಯಾ ಗಾಂಧಿ! P14



ಲಂಡನ್ ಹೃದಯಕ್ಕೇ ಇಸ್ಲಾಮಿಕ್ ಉಗ್ರರ ಲಗ್ಗೆ: ವಾಹನ ದಾಂಧಲೆ, ಚೂರಿ ದಾಳಿಗೆ 7 ಬಲಿ P14

ಯುದ್ಧ ಭೂಮಿಯಲ್ಲಿ ಹೋರಾಡಲು ಶೀಘ್ರ ಸ್ತ್ರೀಯರಿಗೆ ಅವಕಾಶ: ಸೇನಾ ಮುಖ್ಯಸ್ಥ ರಾವತ್

ಎಲ್ಲಾ ವಿಭಾಗಗಳಿಗೂ ಒಂದೇ ಬಾರಿಗೆ ಪರಿಶೀಲನೆ | 16 ಸಹಾಯಕ ಕೇಂದ್ರಗಳಲ್ಲಿ ವ್ಯವಸ್ಥೆ

# ಇಂದಿನಿಂದ ಸಿಇಟಿ ದಾಖಲೆ ಪರಿಶೀಲನೆ

**ವಿಕ ಸುದ್ದಿಲೋಕ** ಬೆಂಗಳೂರು

ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಹೊಸದಾಗಿ ಪ್ರಾರಂಭಿಸಿರುವ ಕೊಪ್ಪಳ ಸೇರಿದಂತೆ ರಾಜ್ಯದ 16 ಸಹಾಯಕ ಕೇಂದ್ರಗಳಲ್ಲಿ ಸಿಇಟಿ ದಾಖಲೆಗಳ ಪರಿಶೀಲನೆ ಪ್ರಕ್ರಿಯೆಯನ್ನು ಜೂನ್ 5ರಿಂದ ಪ್ರಾರಂಭಿಸಲಿದೆ.

ಅಭ್ಯರ್ಥಿಗಳು ಕಡ್ಡಾಯವಾಗಿ ಮೂಲ ದಾಖಲೆ ಹಾಗೂ ಗೆಜೆಟೆಡ್ ಅಧಿಕಾರಿ ದೃಢೀಕರಿಸಿರುವ ಒಂದು ಸೆಟ್ ಜೆರಾಕ್ಸ್ ಪ್ರತಿಗಳನ್ನು ಪರಿಶೀಲನೆ ವೇಳೆ ತರಬೇಕು. ಅಭ್ಯರ್ಥಿಗಳು ವೇಳಾಪಟ್ಟಿ ಪ್ರಕಾರ ಹಾಜರಾಗುವಂತೆ ಕೋರಲಾಗಿದೆ.

ಅರ್ಹವಿರುವ ಎಲ್ಲ ವಿಭಾಗಗಳಿಗೂ ಒಂದೇ ಬಾರಿಗೆ ಅಭ್ಯರ್ಥಿಯ ದಾಖಲೆ ಪರಿಶೀಲನೆ ನಡೆಸುವುದರಿಂದ ಮತ್ತೆ ಪರಿಶೀಲನೆಗೆ ಹಾಜರಾಗುವ ಅಗತ್ಯವಿಲ್ಲ ಎಂದು ಕೆಇಎ ಪ್ರಕಟಣೆ ತಿಳಿಸಿದೆ.

## ಕೌನ್ಸೆಲಿಂಗ್ ಪ್ರಕ್ರಿಯೆ ವೇಳಾಪಟ್ಟಿ

**ಜೂನ್ 14:** ಸೀಟ್ ಮ್ಯಾಟ್ರಿಕ್ಸ್, ಶುಲ್ಕ ಪ್ರಕಟ
**ಜೂನ್ 15:** ಬೆಳಗ್ಗೆ 11ರಿಂದ 23 ಬೆಳಗ್ಗೆ 11: ಆಯ್ಕೆ ದಾಖಲಿಸಲು ಅವಕಾಶ
**ಜೂನ್ 24:** ಸಂಜೆ ಅಣಕು ಸೀಟು ಹಂಚಿಕೆ
**ಜೂನ್ 24:** ರಾತ್ರಿ 8ರಿಂದ 26ರ ಬೆಳಗ್ಗೆ 11: ಸೀಟು ಆಯ್ಕೆ ತಿದ್ದುಪಡಿಗೆ ಅವಕಾಶ.
**ಜೂನ್ 27:** ಸಂಜೆ 4 ಅಧಿಕೃತ ಸೀಟು ಹಂಚಿಕೆ
**ಜೂನ್ 28ರಿಂದ 30:** ಆಯ್ಕೆ ದೃಢೀಕರಿಸುವುದು, ಶುಲ್ಕ ಪಾವತಿಸುವುದು, ಪ್ರವೇಶ ಪತ್ರ ಡೌನ್ ಲೋಡ್ ಮಾಡಿಕೊಳ್ಳುವುದು, ಕಾಲೇಜಿನಲ್ಲಿ ಪ್ರವೇಶ ಪಡೆಯುವುದು.

## ಯಾವ ದಾಖಲೆ ಇರಬೇಕು?

ಸಾಮಾನ್ಯ ಪ್ರವೇಶ ಪರೀಕ್ಷೆ-2017ಕ್ಕೆ ಭರ್ತಿ ಮಾಡಿ ಸಲ್ಲಿಸಿರುವ ಅರ್ಜಿಯ ಪ್ರತಿ. ಶುಲ್ಕ ಪಾವತಿಸಿರುವ ಚಲನ್‌ನ ಮೂಲ ಪ್ರತಿ. ಸಿಇಟಿ ಪ್ರವೇಶ ಪತ್ರ. ಎಸ್‌ಎಸ್ ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಅಂಕಪಟ್ಟಿ, ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿ (ಬಿಇಒ) ಅಥವಾ ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರಿಂದ ಸಹಿ ಮಾಡಿದ ವ್ಯಾಸಂಗ ಪ್ರಮಾಣ ಪತ್ರ. ಪಾಸ್‌ಪೋರ್ಟ್ ಅಳತೆಯ ಎರಡು ಭಾವಚಿತ್ರ.

## ಸಹಾಯ ಕೇಂದ್ರಗಳು ಎಲ್ಲೆಲ್ಲಿ?

ಸಾಂದರ್ಭಿಕ ಚಿತ್ರ



1. ಬಾಪೂಜಿ ಎಂಜಿನಿಯರಿಂಗ್ ಕಾಲೇಜು ದಾವಣಗೆರೆ
2. ಸರಕಾರಿ ಪಾಲಿಟೆಕ್ನಿಕ್ ಬಳ್ಳಾರಿ
3. ಕೃಷಿ ವಿವಿ ಕಾಲೇಜು, ರಾಯಚೂರು
4. ಪಿಡಿಎ ಎಂಜಿನಿಯರಿಂಗ್ ಕಾಲೇಜು ಕಲಬುರಗಿ
5. ಬಿಎಲ್‌ಡಿಇಎ ವಿಪಿ ಡಾ.ಪಿ.ಜಿ. ಹಳಕಟ್ಟಿ ಎಂಜಿನಿಯರಿಂಗ್ ಕಾಲೇಜು ವಿಜಯಪುರ
6. ಜೈನ್ ಎಂಜಿನಿಯರಿಂಗ್ ಕಾಲೇಜು ಬೆಳಗಾವಿ
7. ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಂಜಿನಿಯರಿಂಗ್ ಕಾಲೇಜು ಧಾರವಾಡ
8. ಗಿರಿಜಾಬಾಯಿ ಎಸ್‌ಎಐಎಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕಾರವಾರ
9. ಸಹ್ಯಾದ್ರಿ ಎಂಜಿನಿಯರಿಂಗ್ ಕಾಲೇಜು ಮಂಗಳೂರು
10. ಜವಾಹರಲಾಲ್ ನೆಹರೂ ನ್ಯಾಷನಲ್ ಎಂಜಿನಿಯರಿಂಗ್ ಕಾಲೇಜು ಶಿವಮೊಗ್ಗ
11. ಸರಕಾರಿ ಎಂಜಿನಿಯರಿಂಗ್ ಕಾಲೇಜು ಹಾಸನ.
12. ವಿದ್ಯಾವರ್ಧಕ ಎಂಜಿನಿಯರಿಂಗ್ ಕಾಲೇಜು ಮೈಸೂರು.
13. ಸಿದ್ದಗಂಗಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ತುಮಕೂರು.
14. ಗುರುನಾನಕ್ ದೇವ್ ಎಂಜಿನಿಯರಿಂಗ್ ಕಾಲೇಜು ಬೀದರ್
15. ಶ್ರೀ ಜಗದ್ಗುರು ಗವಿಸಿದ್ದೇಶ್ವರ ಆಯುರ್ವೇದ ವೈದ್ಯ ಕಾಲೇಜು ಕೊಪ್ಪಳ
16 ಕರ್ನಾಟಕ ಪರೀಕ್ಷಾ ಪ್ರಾಧಿಕಾರ ಬೆಂಗಳೂರು

## ದಾಖಲೆ ಪರಿಶೀಲನೆ

| ದಿನಾಂಕ | ರ್‍ಯಾಂಕ್ |
|---|---|
| 5 | 1ರಿಂದ 700 |
| 6 | 701ರಿಂದ 2500 |
| 7 | 2501ರಿಂದ 5000 |
| 8 | 5001ರಿಂದ 10,000 |
| 9 | 10,001ರಿಂದ 16,000 |
| 10 | 16,001ರಿಂದ 24,000 |
| 12 | 24,001ರಿಂದ 32,000 |
| 13 | 32,001ರಿಂದ 40,000 |
| 14 | 40,001ರಿಂದ 50,000 |
| 15 | 50,001ರಿಂದ 60,000 |
| 16 | 60,001ರಿಂದ 72,000 |
| 17 | 72,001ರಿಂದ 82,000 |
| 19 | 82,001ರಿಂದ 96,000 |
| 20 | 96,001ರಿಂದ 1,10,000 |
| 21 | 1,10,001ರಿಂದ 1,16,001 (ಕೊನೇ ರ್‍ಯಾಂಕ್). |

## ಇಚ್ಛೆ/ ಆಯ್ಕೆ ದಾಖಲಿಸಲು ಅವಕಾಶ

ರಾಜ್ಯ ಸರಕಾರದಿಂದ ಸೀಟ್ ಮ್ಯಾಟ್ರಿಕ್ಸ್ ಪ್ರಕಟವಾದ ನಂತರ ವಿದ್ಯಾರ್ಥಿಗಳು ತಮ್ಮ ಆಯ್ಕೆಯ ಕೋರ್ಸ್‌ಗಳಿಗೆ ಆನ್‌ಲೈನ್ ಮೂಲಕ ಆಯ್ಕೆ/ ಇಚ್ಛೆ (ಆಪ್ಷನ್ ಎಂಟ್ರಿ) ದಾಖಲಿಸಲು ಅವಕಾಶ ಇದೆ. ವಿದ್ಯಾರ್ಥಿಗಳು ಕಾಲೇಜು, ಕೋರ್ಸ್ ಹಾಗೂ ಪ್ರವರ್ಗವಾರು ಸೀಟುಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ದಾಖಲಾತಿ ಪರಿಶೀಲನೆ ನಂತರ ಅರ್ಹ ವಿದ್ಯಾರ್ಥಿಗಳು ಮಾತ್ರ ಆಯ್ಕೆ/ ಇಚ್ಛೆ ದಾಖಲಿಸಲು ಅವಕಾಶವಿರುತ್ತದೆ.

## 'ನೀಟ್' ಬರೆದವರಿಗೂ ಸಿಇಟಿಯಲ್ಲೂ ನೋಂದಣಿ

ವೈದ್ಯಕೀಯ ಮತ್ತು ದಂತ ವೈದ್ಯಕೀಯ ಕೋರ್ಸ್‌ಗಳ ಪ್ರವೇಶಕ್ಕೆ 'ನೀಟ್' ಮಾತ್ರ ಬರೆದ ವಿದ್ಯಾರ್ಥಿಗಳು ಸಿಇಟಿ-2017ರಲ್ಲೂ ನೋಂದಣಿ ಮಾಡಲು ಸೂಚಿಸಲಾಗಿದೆ. ಇದಕ್ಕಾಗಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ವೆಬ್‌ಸೈಟ್‌ನಲ್ಲಿ ಲಿಂಕ್ ಕಲ್ಪಿಸಲಾಗಿದೆ. ಈ ಮೂಲಕ ಇದೇ 8ರೊಳಗೆ ನೋಂದಣಿ ಮಾಡಿಕೊಳ್ಳುವಂತೆ ಸೂಚಿಸಲಾಗಿದೆ. ನೀಟ್ ಮತ್ತು ಸಿಇಟಿ ಎರಡೂ ಬರೆದ ವಿದ್ಯಾರ್ಥಿಗಳು ನೀಟ್ ನೋಂದಣಿ ಸಂಖ್ಯೆ ಹಾಗೂ ಪ್ರವೇಶ ಪತ್ರದ ಸಂಖ್ಯೆಯನ್ನು ದಾಖಲಿಸಬೇಕು ಎಂದು ಕೆಇಎ ಪ್ರಕಟಣೆ ತಿಳಿಸಿದೆ.